ವಾದಿ ಉದ್ದೇಶಿತ ಪ್ರತಿವಾದಿಯನ್ನು ಈ ದಾವೆಯಲ್ಲಿ ಸೇರಿಸಲು ಅರ್ಜಿ ಸಲ್ಲಿಸಿರುತ್ತಾರೆ. ಉದ್ದೇಶಿತ ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿದ್ದು ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ. ಪ್ರತಿವಾದಿ 2 ಮತ್ತು 3 ರವರು ದಾವಾ ಸ್ವತ್ತಿನ ಆದಾರದ ಮೇಲೆ ಉದ್ದೇಶಿತ ಪ್ರತಿವಾದಿ ಸಂಸ್ಥೆಯಲ್ಲಿ ಸಾಲ ಪಡೆದಿದ್ದು ಆ ಕಾರಣಕ್ಕಾಗಿ ಉದ್ದೇಶಿತ ಪ್ರತಿವಾದಿಯನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಬೇಕೆಂದು ವಾದಿ ಪರ ವಕೀಲರ ವಾದವಾಗಿರುತ್ತದೆ. ಉದ್ದೇಶಿತ ಪ್ರತಿವಾದಿಗೆ ನೋಟಿಸ್ ಸಹ ನೀಡಲಾಗಿದ್ದು ಅವರು ನೀಡಿದ ಉತ್ತರವನ್ನು ಸಹ ಹಾಜರುಪಡಿಸಿರುತ್ತಾರೆ. ಉದ್ದೇಶಿತ ಪ್ರತಿವಾದಿಯನ್ನು ದಾವೆಯಲ್ಲಿ ಪ್ರತಿವಾದಿಯನ್ನಾಗಿ ಮಾಡಿದ್ದಲ್ಲಿ ಅವರು ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಬಹುದಾಗಿದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲಾಗಿದೆ. ವಾದಿಗೆ ಉದ್ದೇಶಿತ ಪ್ರತಿವಾದಿಯನ್ನು ಈ ದಾವೆಯಲ್ಲಿ ಸೇರಿಸಲು ಅನುಮತಿಸಲಾಗಿದೆ. ತಿದ್ದುಪಡಿ ವಾದ ಪತ್ರಕ್ಕಾಗಿ ದಿಃ 07-08-2019 ಕ್ಕೆ ನಿಗಧಿಪಡಿಸಲಾಯಿತು.

ಸೀನಿಯರ್ ಸಿವಿಲ್ ಜಡ್ಜ್, ಆನೇಕಲ್.

This is a True Copy of the Court Records Online. Authenticated @ districts.ecourtsindia.com/cnr/KABR210006252006/truecopy/order-1.pdf

www.ecourtsindia.com